ನುಣುಚಿಕೊಳ್ಳತ್ತಿದ್ದಾರೆ. ಆದ್ದರಿಂದ ಆರೋಗ್ಯ ಇಲಾಖೆಯವರು ವಿಶೇಷವಾದ ಆಸಕ್ತಿಯನ್ನು ತೆಗೆದುಕೊಂಡು ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗಕ್ಕೆ ಅವೇರ್‌ನೆಸ್ ಕ್ರಿಯೇಟ್ ಮಾಡಬೇಕು. ಇಲ್ಲದಿದ್ದರೆ ಅದು ಮಾಮೂಲಿಯ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿರುತ್ತದೆ.

(ಇ) ದಕ್ಷಿಣ ಕನ್ನಡ ಜಿಲ್ಲೆಯ ಸಜಿಪುಮನ್ನೂರು ಗ್ರಾಮದಲ್ಲಿ ಬಾಲಕಿಯು ವಿದ್ಯುತ್ ವೈರ್ ತುಳಿತದಿಂದ ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ.

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸಜಿಪುಮನ್ನೂರು ಗ್ರಾಮದಲ್ಲಿ ಸುಮಾರು 7 ವರ್ಷದ ಮರಿಯಮ್ಮ ಯಾನೆ ಮಿಸ್ರಿ ಎಂಬು ಹುಡುಗಿ ಮದರಸದಿಂದ ಮನೆಗೆ ಹೋಗುವಾಗ ದಾರಿಯಲ್ಲಿ ಬಿದ್ದಿದ್ದಂಥ ವಿದ್ಯುತ್ ವೈರ್‌ನ್ನು ತುಳಿದಾಗ ವಿದ್ಯುತ್ ಅಘಾತವಾಗಿ ಇಡೀ ಅರ್ಧ ದೇಹ ಬೆಂದುಹೋಗಿರುತ್ತದೆ. ಈ ಹೈ-ಟೆನ್‌ಷನ್ ವೈರ್ ಏಕೆ ಬಿದ್ದಿರುತ್ತದೆ ಎಂದರೆ 10 ಎಂ.ಎಂ.ದಪ್ಪದ ವೈರ್ ಹಾಕುವ ಬದಲಾಗಿ 6 ಎಂ.ಎಂ. ದಪ್ಪದ ವೈರ್ ಹಾಕಿರುವುದರಿಂದ ವೈರ್ ಕಟ್ಟಾಗಿ ಕೆಳಗೆ ಬಿದ್ದಿದೆ ಎನ್ನುವ ವರದಿ ಇದೆ. ಆ ಹುಡುಗಿಯನ್ನು ತುರ್ತು ಚಿಕಿತ್ಸಾ ವಿಭಾಗಕ್ಕೆ ತೆಗೆದುಕೊಂಡು ಹೋಗಿ ಚಿಕಿತ್ಸೆ ಕೊಡುವಾಗ ಇಡೀ ಬೆಂದ ಬಲಗೈಯನ್ನು ಕತ್ತರಿಸಬೇಕಾಗುತ್ತದೆ. ಎಡಗೈ ಬೆರಳನ್ನು ಈಗಾಗಲೇ ಕತ್ತರಿಸಿದ್ದಾರೆ. ಈ ಹುಡುಗಿಯ ತಂದೆ ಅಬ್ದುಲ್ ರೆಹಮಾನ್ ಎನ್ನುವ ಕಾರು ಚಾಲಕ. ನರಳಾಡುತ್ತಿರುವಂಥ ಈ ಹುಡುಗಿಗೆ ಯಾವುದೇ ರೀತಿಯಲ್ಲಿ ವೈದ್ಯಕೀಯ ನೆರವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲದಿರುವಂಥ ಒಬ್ಬ ವ್ಯಕ್ತಿ. ಇಂಥ ಪರಿಸ್ಥಿತಿಯಲ್ಲಿ ನೀವು ನೆರವನ್ನು ಕೊಡಬೇಕೆಂದು ಕೆ.ಪಿ.ಟಿ.ಸಿ.ಎಲ್.ರವರನ್ನು ವಿಚಾರಿಸಿದಾಗ ಅಲ್ಲಿಂದ ಈ ಹುಡುಗಿಯ ವೈದ್ಯಕೀಯ ಖರ್ಚಿನ ಸಲುವಾಗಿ ಬಂದಿರುವುದು ಕೇವಲ 27 ಸಾವಿರ ರೂ.ಗಳು ಮಾತ್ರ. ಮುಖ್ಯಮಂತ್ರಿಗಳ ಪರಿಹಾರಧನದಿಂದ ರೂ. 10 ಸಾವಿರ ಬಂತು. ವೈದ್ಯಕೀಯ ಖರ್ಚಿನ ಸಂಬಂಧ ಸುಮಾರು ರೂ. 2 ಲಕ್ಷದಷ್ಟಕ್ಕೆ ಬಿಲ್ ಬಂದಿದೆ. ಆದರೆ ಯಾವುದೇ ನೆರವನ್ನು ಕೊಡುವ ದೃಷ್ಟಿಯಿಂದ ಕೆ.ಪಿ.ಟಿ.ಸಿ.ಎಲ್. ಮುಂದಾಗಿಲ್ಲ. ಕೆ.ಪಿ.ಟಿ.ಸಿ.ಎಲ್.ನ ಅಧ್ಯಕ್ಷರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ- ದಿವಸಕ್ಕೆ ಮೂರು ಅಕ್ಸಿಡೆಂಟ್‌ಗಳು ಆಗುತ್ತದೆ, ನಾವು ಎಷ್ಟು ಜನರಿಗೆ ಪರಿಹಾರ ಕೊಡುವುದು, ಯಾವ ರೀತಿ ಕೊಡಬಹುದು, ನಮ್ಮ ಕಾನೂನಿನ ನಿಬಂಧನೆಯಲ್ಲಿ ನಮ್ಮಲ್ಲಿಂದ ಪರಿಹಾರ ಕೊಡುವ ಪ್ರಾವಿಜನ್ ಇಲ್ಲ ಎಂದು ಹೇಳುವಂಥ ಮಾತನ್ನು ಆಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್ ಇದೆ. ಆದರ ಪ್ರಮುಖರನ್ನು ಸಂಪರ್ಕ ಮಾಡಿದಾಗ ನಾವು ಪರಿಶೀಲಿಸುತ್ತೇವೆಂದು ಹೇಳಿದರು. ಆದರ ನಂತರ ಅವರಿಂದ ನನಗೆ ಒಂದು ಪತ್ರ ಬಂದಿದ್ದು ಅದು ಹೀಗಿದೆ.

'ಮೇಲ್ಕಂಡ ತಮ್ಮ ಪತ್ರ ತಲುಪಿತು. ಕೋರ್ಟಿನ ತಡೆಯಾಜ್ಞೆ ಇರುವುದರಿಂದ ನಾವು ಯಾವುದೇ ರೀತಿಯ ನಿರ್ದೇಶನವನ್ನು ಕೆ.ಪಿ.ಟಿ.ಸಿ.ಎಲ್.ಗೆ ನೀಡಲು ಬಾರದೇ ಇರುವ ಪ್ರಯುಕ್ತ...'

ಅಂದರೆ ನಿರ್ದೇಶನ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಹಾಗಾದರೆ ಇದಕ್ಕೆ ಪರಿಹಾರವನ್ನು ಯಾರು ಕೊಡಬೇಕು? ಇಂಥ ಅಪಘಾತದ ಘಟನೆಗಳು ನಿರಂತರವಾಗಿ ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿದೆ. ಕನಿಷ್ಟ ವೈದ್ಯಕೀಯ ಚಿಕಿತ್ಸಾ ಶುಲ್ಕವನ್ನು ತಕ್ಷಣ ಕೊಡುವ ವಿಚಾರದಲ್ಲಿ ಕೆ.ಪಿ.ಟಿ.ಸಿ.ಎಲ್.ಗೆ ಹೊಣೆಗಾರಿಕೆಯನ್ನು ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಇಂಥ ಘಟನೆಗಳು ನಡೆದಂಥ ಸಂದರ್ಭದಲ್ಲಿ ಮಾನವೀಯ ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಏನಾದರೂ ಪರಿಹಾರವನ್ನು ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಾ, ಈ ನಿಟ್ಟಿನಲ್ಲಿ ನಾನು ರೆಫರ್ ಮಾಡಿದಂಥ ಕೇಸ್‌ಗೆ ತಾವು ತಕ್ಷಣ ಮಾನವೀಯ ನೆಲೆಯಲ್ಲಿ ಪರಿಹಾರವನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ವಿಶೇಷವಾಗಿ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಅಕ್ಸಿಡೆಂಟ್ ಆಗಿರುವುದು ನಿಜ. 27 ಸಾವಿರ ರೂಪಾಯಿಗಳನ್ನು ಆ ಫಲಾನುಭವಿಗೆ ಕೊಟ್ಟಿದ್ದೇವೆ. ಬೋರ್ಡ್‌ನಲ್ಲಿ ಕೆ.ಪಿ.ಟಿ.ಸಿ.ಎಲ್.ನವರು ರೆಸಲ್ಯೂಷನ್ ಮಾಡಿ ಒಟ್ಟು 81,907 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಆ ಹಣವನ್ನು ಅವರಿಗೆ ವಿತರಿಸಲಾಗುವುದು.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗುತ್ತಿದೆ ಎಂದರೆ ನೀವು ಕೋರ್ಟ್‌ಗೆ ಹೋಗಿ, ಪರಿಹಾರ ಕೊಡುವುದಕ್ಕೆ ಕೋರ್ಟಿನಿಂದ ಡೈರೆಕ್ಷನ್ ಬರಲಿ, ನಂತರ ಕೊಡುತ್ತೇವೆಂದು ಹೇಳುವಂಥ ಮಾತು ಕೆ.ಪಿ.ಟಿ.ಸಿ.ಎಲ್.ನಿಂದ ಬರುತ್ತಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. 81 ಸಾವಿರ ರೂಪಾಯಿಗೆ ಸಂಬಂಧಪಟ್ಟ ಪ್ರಥಮ ಬಿಲ್ ಆಗಿರುತ್ತದೆ. ಅದರ ನಂತರ ಇನ್ನೊಂದು ಬಿಲ್ ಬಂದಿದೆ. ಅದಕ್ಕೆ ಪರಿಹಾರ ಕೊಡುವುದಕ್ಕೆ ಕೆ.ಪಿ.ಟಿ.ಸಿ.ಎಲ್. ಮುಂದೆ ಬರುತ್ತಿಲ್ಲ.

ಶ್ರೀ ವೀರಕುಮಾರ್ ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಕೆ.ಇ.ಆರ್.ಸಿ. ಡೈರೆಕ್ಷನ್ ಪ್ರಕಾರ ಆಸ್ಪತ್ರೆಯಿಂದ ಏನು ಬಿಲ್ ಬಂದಿದೆ ಆ ಬಿಲ್ಲಿನ ಹಣವನ್ನು ನಾವು ಸ್ಯಾಂಕ್ಷನ್ ಮಾಡಿದ್ದೇವೆ. ಆ ಅಮೌಂಟ್ ಕೊಡುತ್ತಿದ್ದೇವೆ.